ಆಗಲಿ ಎಂದು ಗೋಡೆಗೆ ತೂಗು ಹಾಕಿದ ಫೋಟೊ ಕಡೆ ನೋಡಿ ಕೈ ಮುಗಿದರು. ಅವರ ಹಿರಿ ತಾತ ಮಲ್ಲನಗೌಡ, ತಾತ ವೀರನಗೌಡ, ಅಪ್ಪ ಮಲ್ಕನಗೌಡರ ಮೂರು ಫೋಟೊ ತೂಗು ಹಾಕಿದ್ದರು. ಗೌಡರು ಫೋಟೊಗಳಿಗೆ ಬಂಗಾರದ ಕಟ್ಟು ಹಾಕಿಸಿದ್ದರು. ಮನಿಗೆ ಯಾರೇ ಬಂದರೂ ಆ ಮೂರು ಫೋಟೊಗಳ ಬಗ್ಗೆ ವಿವರಣೆ ನೀಡುತ್ತಿದ್ದರು. 'ಇವರು ನಮ್ಮ ಹಿರಿ ತಾತ ಕುದರೆ ಮೇಲೆ ಓಡಾಡಿದವರು. ಇವರ ಕಾಲಕ್ಕ ನಮ್ಮ ಜಮೀನು ಸಾವಿರ ಎಕರೆ ಇತ್ತಂತ, ನಮ ತಾತ ವೀರನಗೌಡ ಟೆನೆಂಟ್ ಕಾಯ್ದೆ ಬಂದಾಗ ಐದು ನೂರು ಎಕರೆ ಭೂಮಿ ದಲಿತರಿಗೆ ಹಂಚಿದನಂತ. ಅದಕ ಸರಕಾರದವರು ವಿಧಾನಸೌಧದಾಗ ಸನ್ಮಾನ ಮಾಡಿದ್ದರಂತ. ವಿಧಾನಸೌಧ ನೋಡಿ ನಮ್ಮ ತಾತ ಇಲ್ಲಿಗೆ ಒಮ್ಮೆ ಎಂಎಲ್‌ಎ ಆಗಿ ಬರಬೇಕಂತ ಆಶೆ ಪಟ್ಟಿದನಂತ. ಆದರ ಚುನಾವಣೆಗೆ ನಿಲ್ಲಬೇಕನ್ನದ್ರಾಗ ಶಿವನ ಪಾದ ಸೇರಿದ್ನಂತ. ಆತ ಇದ್ದರ ಇವತ್ತು ವಿಧಾನಸೌಧದಾಗ ಸಚಿವನಾಗಿ ಇರುತಿದ್ದ. ಸುತ್ತಲು ಹಳ್ಳಿಗೆ ಆತನೇ ಮೊದಲು ಕಾರು ತಂದಿದ್ದನಂತ. ಕಾರು ನೋಡಾಕ ಜನ ಆವಾಗ ಬಂಡಿ ಕಟ್ಟಿಗಂಡ ಬರುತ್ತಿದ್ದರಂತ. ನಮಪ್ಪ ಮಾತ್ರ ಸಂಪನ್ನ ಮನುಷ್ಯ. ಯಾವುದು ಉಸಾಬರಿ ಇಲ್ಲದಂಗ ಇದ್ದರು. ನಮ್ಮವ್ವನೇ ಹೊಲ ಮನೆ ನೋಡಿಕೊಂಡು ಹೋತಿದ್ಲು. ಆದರ ಯಾರು ಆಸ್ತಿ ಮಾಡಲಿಲ್ಲ ಕಳಿಲಿಲ್ಲ. ನನ್ನ ಕಾಲಕ್ಕ ಅಂಗೆ ಉಳುದದ' ಎಂದು ಮನಿಗೆ ಬಂದ ಪ್ರತಿಯೊಬ್ಬರ ಮುಂದ ಹೇಳುತ್ತಿದ್ದರು. ಇದನ್ನು ಕೇಳಿ ಕೇಳಿ ಕೆಂಚನಿಗೆ ಬಾಯಿಪಾಠ ಆಗಿತ್ತು.

'ಲೇ ಶ್ಯಾಂತ್ಯಾ... ನಿನ ಮಗಗ ಬುದ್ಧಿ ಹೇಳು. ನಮ್ಮ ಕಾಲದಂಗ ಈಗಿನ ಮಂದಿ ಅಲ್ಲ. ಹೆಣದ ಮ್ಯಾಲ ಮನೆ ಕಟ್ಟುತಾರ. ಮಂದಿನ್ನ ಕೂಡಿಸೋ ತಾಕತ್ತು ನಿನಗಿಲ್ಲ. ಸುಮ್ಮನ ಮಂದ್ಯಾಗ ಹೆಸರು ಕೆಡಿಸಿಗ್ಯಾಬ್ಯಾಡ. ನಿನಗ ಒಳ್ಳೇದು ಮಾಡೋ ಮನಸ್ಸಿದ್ದರ ಊರು ಮುಂದಿನ ಕೆರಿ ಹಸನು ಮಾಡಸಿ ನೀರು ನಿಲ್ಲಂಗ ಮಾಡಿರಿ. ಬ್ಯಾಸಿಗ್ಯಾಗ ದನಕ್ಕ ಮನಿಷೇರಿಗಿ ಕುಡಾಕ ನೀರು ಆತಾವ' ಎಂದು ಗೌಡರಿಗೆ ಯಾರೋ ಕಿವಿಯಲ್ಲಿ ಹೇಳಿದಂಗಾಯಿತು. ದಿಗ್ಗನೆದ್ದು ಫೋಟೊದ ಕಡೆ ನೋಡಿದ. ತಾತ ವೀರನಗೌಡ ಮುಗುಳುನಕ್ಕಂತೆ ಕಂಡಿತು. ತಕ್ಷಣಕ್ಕ ಲಿಂಗನಗೌಡ ಹೇಳಿದ ಮಾತುಗಳು ನೆನಪಾದವು. 'ನೋಡು, ನಾವು ಡೆಲ್ಲಿಗೆ ಹೋತಿವಿ ಎಲ್ಲಾ ವ್ಯವಸ್ಥಾ ಮಾಡ್ತೀವಿ. ಈಗ ನಂಬಿಕಿ ಇರೋ ಮನುಷ್ಯ ಅಂದರ ನೀನೊಬ್ಬನೆ. ನಿನ್ನ ಮಗ ಮನುಸ್ಸು ಮಾಡ್ಯಾನ. ನಿನ್ನ ಹತ್ತಿರ ಬೇಕಾದಷ್ಟು ಹಣ ಐತಿ. ಮಗನೂ ಬೇಕಾದಷ್ಟು ಗಳಿಸ್ಯಾನ. ಇದರಿಂದ ನಿನಗ ಮತ್ತಷ್ಟು ಬಲ ಬರ್ತದ. ನಿನ ಜತಿಗಿ ನಾವು ಇದ್ದೇ ಇರ್ತೀವಿ. ನಿನಗಂದರ ಟಿಕೆಟ್ ಸಿಕ್ಕೇ ಸಿಗ್ತದ' ಎಂದು ಹೇಳಿದ್ದರು. ಅವೇ ಮಾತುಗಳು ತಲೆಯಲ್ಲಿ ಕೊರೆಯುತ್ತಿದ್ದವು. ಮಗ ನಿನ್ನೆ ಲಾರಿಯಲ್ಲಿ ಸಾಮಾನು ತುಂಬಿ ಕಳಿಸಿದ್ದ.

'ಲೇ... ಕೆಂಚ...'

'ಯಪ್ಪಾ...'

'ಮಗ ಊರಿಗೆ ಬರುತಾನಂತಲೇ. ಮುಂದಿನ ವರ್ಷ ಎಲೆಕ್ಷನ್‌ಗೆ ನಿಲ್ತಾನಂತ.'

'ಅಂಗ್ಯಾಕಪ್ಪ ಗೌಡ. ಆತ ದೂರುದೂರಾಗ ಐದಾನಂದಿರಿ. ಆತಗ ಎಷ್ಟೋ ಸಂಬಳ ಐತೆಂತ ಅಂದೆಲಪ. ಅದೆಲ್ಲ ಬುಟ್ಟು ಇದುಕ್ಯಾಕ ಬರುತಾನಂತೀನಿ.'

'ಆತಗ ಯಾರು ಹೇಳಬೇಕಲೆ. ಈಗಂತು ತಯಾರಾಗಿ ಕುಂತನ್ನೋಡು. ನಿಮ್ಮ ಗೌಡಸಾನಿ ಇದ್ದರ ಬೇಸಿತ್ತು. ಆಕಿ ಮಾತು ಕೇಳುತಿದ್ದ.'

'ಯಪ್ಪಾ ಗೌರಮ್ಮ ಗೌಡಸಾನಿ ಇದ್ದರ ಈ ಮನಿಗಿ ಬೆಳಕೇ ಬ್ಯಾರಿತ್ತಪ್ಪೋ' ಎಂದು ಕಣ್ಣಲ್ಲಿ ನೀರು ತಂದುಕೊಂಡ.

'ನೀ ಕಣ್ಣಾಗ ನೀರು ತರುಬಾಡಲೇ... ನನ್ನ ಎದಿ ಒಡೆದು ಹೋತದ.'

'ಅಲ್ಲಪಾ ಅವಾಗ ಯಾರು ಮಾತು ಕೇಳಿದಿ ಹೇಳು.'